# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಂಖ್ಯೆ: ವಾರ್ಡ್ ಸಂಖ್ಯೆ 10/ಸಭೆ/ಪಿಆರ್/23/2020-21** **ದಿನಾಂಕ: 18/09/2021.**

ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ. 10 ದೊಡ್ಡಬೊಮ್ಮಸಂದ್ರ ವಾರ್ಡ್ ಕಛೇರಿಯಲ್ಲಿ ದಿನಾಂಕ: 18/09/2021 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದ ಅಧಿಕಾರಿ/ಸದಸ್ಯರು**

1. ಶ್ರೀ ಜಿ.ಶ್ರೀನಿವಾಸಮೂರ್ತಿ, ನೋಡಲ್ ಅಧಿಕಾರಿ ಹಾಗೂ ಸ.ಕಾ.ಅ, ಕೊಡಿಗೇಹಳ್ಳಿ ಉಪವಿಭಾಗ
2. ಶ್ರೀಮತಿ. ಶ್ವೇತಾ ಎನ್.ಆರ್, ಸಹಾಯಕ ಅಭಿಯಂತರರು
3. ಶ್ರೀಮತಿ ಡಾ॥ ಶೋಭ ನಾಗೇಶ್, ಆರೋಗ್ಯ ವೈದ್ಯಾಧಿಕಾರಿ
4. ಶ್ರೀ ಮಂಜುನಾಥ್, ಕಿರಿಯ ಆರೋಗ್ಯ ಪರಿವೀಕ್ಷಕರು
5. ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿರವರು.
6. ಬಿ.ಬಿ.ಎಂ.ಪಿ. ವಿದ್ಯುತ್ ವಿಭಾಗದ ಅಧಿಕಾರಿಗಳು.
7. ಶ್ರೀ. ಪಿಳ್ಳಪ್ಪ, ಸದಸ್ಯರು
8. ಶ್ರೀಮತಿ. ಬೇಬಿ ರಾಣಿ, ಸದಸ್ಯರು
9. ಶ್ರೀ. ಮಲ್ಯಾದ್ರಿ, ಸದಸ್ಯರು,
10. ಶ್ರೀ. ಗೋಪಾಲಕೃಷ್ಣ, ಸದಸ್ಯರು

ಶ್ರೀ ಜಿ. ಶ್ರೀನಿವಾಸಮೂರ್ತಿ, ನೋಡಲ್ ಅಧಿಕಾರಿ:- ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

**ಶ್ರೀಮತಿ ಡಾ॥ ಶೋಭ ನಾಗೇಶ್, ಆರೋಗ್ಯ ವೈದ್ಯಾಧಿಕಾರಿ:-**

- ಪ್ರಸ್ತುತ ಕೋವಿಡ್-19 ರ 3ನೇ ಅಲೆಯಲ್ಲಿ ಹಿಂದಿನಂತೆ ರೋಗಲಕ್ಷಣಗಳು ಕಂಡುಬರುವುದಿಲ್ಲ, ನೇರವಾಗಿ ಶ್ವಾಸಕೋಶಕ್ಕೆ ಹಾನಿ ಮಾಡುವುದರಿಂದ ಸಾರ್ವಜನಿಕರು ಬಹಳ ಎಚ್ಚರದಿಂದ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ನು ಪಾಲಿಸುತ್ತ, ಮೊದಲಿನಂತೆಯೇ ಮಾಸ್ಕ್ ಹಾಗೂ ಸ್ಯಾನಿಟೈಜರ್ ಉಪಯೋಗಿಸುತ್ತಿರುವಂತೆ ಸಾರ್ವಜನಿಕರಿಗೆ ಸೂಚಿಸಿದರು.
- ಹಾಗೂ ಸಾರ್ವಜನಿಕರಿಗೆ ಅನುಕೂಲವಾಗಲೆಂದು ವ್ಯಾಕ್ಸಿನೇಷನ್ ನೀಡಲು ಮೊಬೈಲ್ ಟೀಮ್ ರಚನೆ ಮಾಡಲಾಗಿದ್ದು, ಸದರಿ ಮೊಬೈಲ್ ಟೀಮ್ ಸಾರ್ವಜನಿಕ ಸ್ಥಳಗಳಾದ ಬಸ್‌ನಿಲ್ದಾಣದ ಹತ್ತಿರ ಮತ್ತು ಬಡಾವಣೆಗಳಲ್ಲಿ ನಿಗಧಿತ ದಿನದಂದು ಕಾರ್ಯನಿರ್ವಹಿಸುತ್ತದೆ, ಸದರಿ

ವೇಳಾಪಟ್ಟಿಯನ್ನು ಪ್ರತಿದಿನ ಕೋವಿಡ್–19 ಟೀಮ್ ವಾಟ್ಸ್‌ಆಪ್ ಗ್ರೂಪ್‌ನಲ್ಲಿ ಪ್ರಕಟಿಸಲಾಗುತಿದ್ದು, ಸಾರ್ವಜನಿಕರು ಇದರ ಉಪಯೋಗ ಪಡೆದುಕೊಳ್ಳಲು ಸೂಚಿಸಿದರು.

**ಬಿ.ಡಬ್ಲ್ಯು.ಎಸ್.ಎಸ್.ಬಿ:–**

- ದೊಡ್ಡಬೊಮ್ಮಸಂದ್ರ ವ್ಯಾಪ್ತಿಯಲ್ಲಿ ಬರುವ ಬೈರಪ್ಪ ಗಾರ್ಡನ್‌ನಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ. ಯ ಛೇಂಬರ್‌ಗಳನ್ನು ದುರಸ್ಥಿ ಮಾಡಲಾಗಿದ್ದು, ಸದರಿ ಡೆಬ್ರಿಸ್ ರಸ್ತೆಯಲ್ಲಿಯೇ ಸುಮಾರು ದಿನಗಳಿಂದ ಇದ್ದು, ಇದನ್ನು ಕೂಡಲೇ ತೆರವುಮಾಡುವಂತೆ ಸಾರ್ವಜನಿಕರು ಕೋರಿರುತ್ತಾರೆ.
- ಈ ಕುರಿತು, ಬಿ.ಡಬ್ಲ್ಯು.ಎಸ್.ಎಸ್.ಬಿ. ಅಧಿಕಾರಿಗಳು ಕೂಡಲೇ ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ.
- ಚಾಮುಂಡೇಶ್ವರಿ ಬಡಾವಣೆಯ 2ನೇ ಹಾಗೂ 3ನೇ ಮುಖ್ಯರಸ್ತೆಯಲ್ಲಿ ಬರುವ ಅಶ್ವತ್ಥ ಕಟ್ಟೆ ಮುಂಬಾಗ ಬೋರ್‌ವೆಲ್ ಪ್ಯಾನಲ್ ಬೋರ್ಡ್ ಹಾಳಾಗಿದ್ದು, ಸದರಿ ಪ್ಯಾನಲ್ ಬೋರ್ಡ್‌ನ್ನು ದುರಸ್ಥಿಪಡಿಸಲು ಕೋರಿರುತ್ತಾರೆ.
- ಈ ಕುರಿತು ಬಿ.ಡಬ್ಲ್ಯು.ಎಸ್.ಎಸ್.ಬಿ. ಅಧಿಕಾರಿಗಳು ಬೋರ್‌ವೆಲ್ ವಿಭಾಗದ ಅಧಿಕಾರಿಗಳಿಗೆ ತಿಳಿಸಿ ಕ್ರಮಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

**ಘನತ್ಯಾಜ್ಯ ನಿರ್ವಹಣೆ**

- ವಾರ್ಡ್ ವ್ಯಾಪ್ತಿಯಲ್ಲಿ 12 ಬ್ಲಾಕ್ ಸ್ಪಾಟ್‌ಗಳಿದ್ದು, ವಾರ್ಡ್‌ನಲ್ಲಿ ಬ್ಲಾಕ್ ಸ್ಪಾಟ್ ಇಲ್ಲದಂತೆ ಮಾಡಲು ಸಾರ್ವಜನಿಕರು ಕೋರಿರುತ್ತಾರೆ.
- ಈ ಕುರಿತು, ಪಾಲಿಕೆಯ ಕಿರಿಯ ಆರೋಗ್ಯ ಪರಿವೀಕ್ಷಕರು ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ.

ಶ್ರೀ ಜಿ.ಶ್ರೀನಿವಾಸಮೂರ್ತಿ, ನೋಡಲ್ ಅಧಿಕಾರಿ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

ನೋಡೆಲ್ ಅಧಿಕಾರಿ ವಾರ್ಡ್–10 ಹಾಗೂ ಸಹಾಯಕ
ಕಾರ್ಯಪಾಲಕ ಅಭಿಯಂತರರು
ಕೊಡಿಗೇಹಳ್ಳಿ ಉಪವಿಭಾಗ

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಆರೋಗ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
8. ಕಛೇರಿ ಕಡತಕ್ಕೆ.